ಅ.ದಾ. ನಂ.111/2014
ಡಿಡಬ್ಲೂ: 1

ಸಾಕ್ಷಿಯನ್ನು ಇಂದು ದಿನಾಂಕ 15-03-2022 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.
ಮುಂದುವರೆದ ಪಾಟೀ ಸವಾಲು ವಾದಿ ಪರ :ಶ್ರೀ.ಆರ್.ಐ.ಎಮ್. ವಕೀಲರಿಂದ

2. ದಿನಾಂಕ; 27.05.2013 ರಂದು 1 ನೆ ಪ್ರತಿವಾದಿಯ ಹೆಸರಿನಲ್ಲಿ ಜಮೀನು ಸರ್ವೆ ನಂ. 405/4 ಕ್ಷೇತ್ರ 02 ಎಕರೆ ಇರಲ್ಲಿಲ್ಲ ಎಂದರೆ ಸರಿಯಲ್ಲ. ಸದರಿ ವಿಷಯ ವಾದಿಗೆ ಗೊತ್ತಿದ್ದು ತಕರಾರು ಮಾಡುತ್ತಾರೆ ಎಂದು ತಿಳಿದು 1 ನೇ ಪ್ರತಿವಾದಿ ನನಗೆ ಖೊಟ್ಟಿ ಖರೀದಿ ಪತ್ರ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಾದಿ, 1 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಖರೀದಿಸುವ ಇಚ್ಛೆಯನ್ನು ಎಂದು ವ್ಯಕ್ತಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಖರೀದಿಸುವ ಸಮಯದಲ್ಲಿ 1 ನೇ ಪ್ರತಿವಾದಿ ಹೆಸರಿನಲ್ಲಿದ್ದ ದಾಖಲೆಗಳು ಕಂದಾಯ ಅಧಿಕಾರಿಗಳೊಂದಿಗೆ ನಿಲಾಫೆಯಾಗಿ ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮುಟೇಷನ ನಂ. ಟಿ 195, ಟಿ,224 ಮತ್ತು ಟಿ.259 ಇವುಗಳನ್ನು ವಾದಿಗೆ ಗೊತ್ತಾಗದಂತೆ 1 ನೇ ಪ್ರತಿವಾದಿ ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಆಸ್ತಿ ನಂಬರ 405/1 ಮತ್ತು 405/4 ಖೊಟ್ಟಿಯಾಗಿ ದಾಖಲೆಗಳನ್ನು 1 ನೇ ಪ್ರತಿವಾದಿ ಸೃಷ್ಟಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ.

3. ವಾದಿಯ ಜಮೀನಿನಲ್ಲಿ ಇದ್ದ ಒಡ್ಡು , ಚೇಕ ಡ್ಯಾಮು ಪೊರ್ಟ ಕರಾಬು ಜಮೀನಿನಲ್ಲಿ ಬರುವದಿಲ್ಲ ಎಂದರೆ ಸರಿಯಲ್ಲ. ಜಮೀನು ಸರ್ವೆನಂ 405 ರಲ್ಲಿ ಕ್ಷೇತ್ರ 14 ಎಕರೆ 06 ಗುಂ, 1 ನೆ ಪ್ರತಿವಾದಿ ಪಾಲಿಗೆ , ಕ್ಷೇತ್ರ 10 ಎ ವಾದಿಯ ಪಾಲಿಗೆ ಮತ್ತು ಕ್ಷೇತ್ರ 01 ಎಕರೆ 05 ಗುಂಟೆ ಪ್ರತ್ಯೇಕವಾಗಿ ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. 2 ಎಕರೆ ಕ್ಷೇತ್ರ ಅಸ್ಥಿತ್ವದಲ್ಲಿ ಇಲ್ಲದೇ ಇದ್ದರು 01 ಎಕರೆ 05 ಗುಂಟೆ ಜಮೀನಿನಲ್ಲಿ 02 ಎಕರೆ ಎಂದು ಸೇರಿಸಿ ನನಗೆ ಖೊಟ್ಟಿಯಾಗಿ ಮಾರಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

4. ವಾದಿ ತಾಳಿಕೊಟೆಯಲ್ಲಿ ವಾಸ ಮಾಡುತ್ತಾನೆ ಎಂದರೆ ಸರಿಯಲ್ಲ. ನಾನು ಸಿಂದಗಿಯಲ್ಲಿ ವಾಸ ಇದ್ದೇನೆ. ಜಮೀನು ಸರ್ವೆ ನಂ. 405 ರಲ್ಲಿ ಕ್ಷೇತ್ರ 09 ಎಕರೆ 35 ಗುಂಟೆ, 09 ಎಕರೆ 10 ಗುಂಟೆ, ಈ ಪ್ರಕಾರ ಉತಾರೆಗಳಲ್ಲಿ ವಾದಿಗೆ ಗೊತ್ತಾಗದಂತೆ ನಾನು ಮತ್ತು 1 ನೇ ಪ್ರತಿವಾದಿ ಕೂಡಿಕೊಂಡು ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ಜಮೀನು ಸರ್ವೆ ನಂ. 405 ರ ದಾಖಲೆಗಳನ್ನು ಪರಿಶೀಲಿಸಿದ ನಾನು ನಿಡಿ 37 ರ ದಾಖಲೆಯನ್ನು ತಯಾರಿಸಿಕೊಂಡಿರುತ್ತೆನೆ ಎಂದರೆ ಸರಿಯಲ್ಲ. ಪೊಡಿ ಪ್ರಕರಣಗಳು ವಾದಿಗೆ ಯಾವುದೇ ರೀತಿಯ ಮಾಹಿತಿ ಇಲ್ಲ ಹಾಗೂ ಅದಕ್ಕೆ ಸಹಿ ಹಾಕಿಲ್ಲ ಎಂದರೆ ಸರಿಯಲ್ಲ. 195 ನೇ ಸಾಲಿನಲ್ಲಿ ಆದ ನಿಡಿ 12 ರ "ಡ" ದಲ್ಲಿ ಜಮೀನು ಸರ್ವೆ ನಂ.405 ರಲ್ಲಿ ರಸ್ತೆ ಇದ್ದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿಯಲ್ಲ. ರಸ್ತೆ ಇದ್ದ ಬಗ್ಗೆ ವಾದಿಯ ತಂದೆ ಆಗಲಿ

ಅಥವಾ ಪ್ರತಿವಾದಿಯ ತಂದೆ ಆಗಲಿ ಸದರಿ "ಡ" ವಿರುದ್ದ ಮೇಲಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

5. ವಾದಿ ಸರ್ವೆ ನಂ.405 ರಲ್ಲಿ 10 ಎಕರೆ ಕಬ್ಜಾವಹಿವಾಟು ಹೊಂದಿರುತ್ತಾನೆ ಎಂದರೆ ಸರಿ. ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತಿದ್ದೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ.